ಶ್ರೀ ಟಿ. ಎಂ. ಮಂಜುನಾಥ್.—ಈ ಯೋಜನೆಯನ್ನು ಎಷ್ಟು ದಿವಸದಲ್ಲಿ ಮಾಡಿಸಿಕೊಡುತ್ತೀರಿ ? ಕಂಡಿಯುವ ನೀರಿಗೆ ತುಂಬಾ ತೊಂದರೆ ಇದೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇಷ್ಟೇ ದಿವಸದಲ್ಲಿ ಮಂಜೂರು ಮಾಡುತ್ತೇವೆಂದು ಹೇಳುವುದು ಕಷ್ಟ. ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇನೆ.

ಶ್ರೀ ಟಿ. ತಾರೇಗೌಡ.— ಈ ತಿಂಗಳ ೫ನೇ ತಾರೀಖು ಪುನಃ ೯೦೦ ರೂಪಾಯಿಗಳನ್ನು ಕಟ್ಟಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಅಲ್ಲಿ ಕಷ್ಟ ಏನಿದೆ ಎಂದರೆ ಬೋರ್‌ವೆಲ್, ಟ್ಯಾಂಕಂಗಳನ್ನು ಎಷ್ಟೇ ಕಟ್ಟಿದರೂ ಸಾಲದು. ಅದು ದೊಡ್ಡ ಗ್ರಾಮ ಅಲ್ಲಿ ಆಸ್ಪತ್ರೆ ಇದೆ, ಮತ್ತು ೫೫ ಸಾವಿರಕ್ಕೂ ಹೆಚ್ಚು ಪ್ರಜಾ ಸಂಖ್ಯೆ ಇದೆ, ಪೈಪುಗಳನ್ನು ಕೂಡ ಹಾಕಿ ಮನೆಗಳಿಗೆ ನೀರನ್ನು ತೆಗೆದುಕೊಳ್ಳುವುದರಿಂದ ಆದಾಯ ಬರುತ್ತದೆ. ಆದುದರಿಂದ ಇದನ್ನು ಜಾಗ್ರತೆ ಮಂಜೂರು ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಈಗ ಅದನ್ನು ಸಿಂಪ್ಲಿಫೈಡ್ ಸ್ಕೀಂ ಆಗಿ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಅದಕ್ಕೆ ಒಂದು ಲಕ್ಷ ೧೫ ಸಾವಿರ ರೂಪಾಯಿ ಅಂದಾಜು ಆಗಿದೆ. ಸಿಂಪ್ಲಿಫೈಡ್ ಸ್ಕೀಂ ಅನ್ನು ಮಂಜೂರು ಮಾಡುವುದಕ್ಕೆ ಸರ್ಕಾರ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತದೆ.

Exemption from Payment of Penal Interest by Tractor Owners

221. SRI T. M MANJUNATH (Tiptur).—Will the Minister for Agriculture and and Animal Husbandry be pleased to state :—

(*a*) the number of Tractor owners in Tiptur taluk who got exemption from payment of the penal interest in 1974–75 and 1975–76

(*b*) whether the persons exempted from payment of penal interest belong to Upper Class. Middle Class or Lower Class :

(*c*) whether such exemption will operate in the case of loans obtained through Societies for purchase of tractors ?

SRI N. CHIKKE GOWDA (Minister for Agriculture and Animal Husbandry).—

(*a*) Two.

(*b*) The Government Order No. AF 41 ADO 74, dated 13th/14th August 1975 is applicable to all classes of persons who had secured the loan from Government for the purchase of a tractor. This order gives certain incentives to the ryots for the complete repayment of their arrears of loans and waives all penal interest on the overdue instalments.

(*c*) No.

ಶ್ರೀ ಟಿ. ಎಂ. ಮಂಜುನಾಥ್.—ತಮಗೆ ಆಂಕಿಅಂಶಗಳು ಗೊತ್ತಿದ್ದರೆ ಇಡೀ ದೇಶದಲ್ಲಿ ಎಷ್ಟು ಸಾಲ ಕೊಟ್ಟಿದ್ದಾರೆ, ಎಷ್ಟು ಅರ್ಜಿಗಳು ಬಂದಿವೆ ಎಂಬುದನ್ನು ಹೇಳುತ್ತೀರಾ ?

† ಶ್ರೀ ಎನ್. ಚಿಕ್ಕೇಗೌಡ.—ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.- ಕೆಲವರು ಟ್ರಾಕ್ಟರ್ ಮಾಲೀಕರು ಹಣ ಕಟ್ಟಿದೆ ಇರುವವರಿಗೆ, ಟೈಂ ಹೆಚ್ಚಾಗಿ ತೆಗೆದುಕೊಂಡಿರುವವರಿಗೆ ಪೀನಲ್ ಇಂಟರೆಸ್ಟನ್ನು ವಜಾಮಾಡಿರುತ್ತಾರೆ. ಅದೇ ರೀತಿ ರೈತರಿಗೂ ವಜಾಮಾಡಬೇಕು. ಅವರಿಗೆ ಪದೇ ಪದೇ ನೋಟೀಸು ಹೋಗುವುದರಿಂದ ತೊಂದರೆಯಾಗಿದೆ. ಈ ಬಗ್ಗೆ ಆಜ್ಞೆ ಹೊರಡಿಸಿ ಪೀನಲ್ ಇಂಟರೆಸ್ಟನ್ನು ವಜಾಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಸರ್ಕಾರದ ಆಜ್ಞೆಯನ್ನು ಮಾಡಿದ್ದೇವೆ, ಆದರ ನಂ. ೪೧/೭೪ ತಾರೀಖು ೧೩-೧೪ನೇ ಆಗಸ್ಟ್ ೧೯೭೫. ಇದರ ಬಗ್ಗೆ ಪತ್ರಿಕೆಗಳಲ್ಲೂ ಸಹ ಹೇಳಿಕೆಯನ್ನು ಕೊಟ್ಟಿದ್ದೇನೆ. ೬ ತಿಂಗಳೊಳಗಾಗಿ ಸುಲಭ ದರದ ಬಡ್ಡಿಯನ್ನು ಹಾಕುತ್ತೇವೆ, ಸುಸ್ತಿ ಬಡ್ಡಿಯನ್ನು ವೇವ್ ಮಾಡುತ್ತೇವೆಂದು ಸರ್ಕಾರದ ಆಜ್ಞೆಯನ್ನು ಹೊರಡಿಸಿದ್ದೇವೆ. ಆಜ್ಞೆಯನ್ನು ಹೊರಡಿಸುವುದರ ಜೊತೆಗೆ ಪತ್ರಿಕೆಗಳಲ್ಲೂ ಹೇಳಿಕೆ ಕೊಟ್ಟಿದ್ದೇವೆ. ಈ ಆದೇಶ ಫೆಬ್ರುವರಿ ೧೪ರ ವರೆಗೆ ಜಾರಿಯಲ್ಲಿರುತ್ತದೆ. ಇದಕ್ಕೆ ಸಂಬಂಧವಾಗಿ ನಿಮ್ಮ ತಾಲ್ಲೂಕಿನಲ್ಲಿ ಇಬ್ಬರು ಇದ್ದಾರೆಂದು ಮಾಹಿತಿ ಇದೆ, ತಮಗೂ ತಿಳಿಸಿದ್ದೇನೆ. ಅದರ ಪ್ರಕಾರ ಅರ್ಜಿಕೊಟ್ಟರೆ ಅವರಿಗೂ ಪೀನಲ್ ಇಂಟರೆಸ್ಟನ್ನು ವೇವ್ ಮಾಡುತ್ತೇವೆ.

ಶ್ರೀ ಟಿ. ಎಂ. ಮಂಜುನಾಥ್.—ಅರ್ಜಿ ಕಳುಹಿಸಿಕೊಡುತ್ತೇನೆ, ಅವರು ಪೂರ್ತಿ ೭ ಕಂತುಗಳ ಹಣವನ್ನು ಅಂದರೆ ೩೬೦೦ ಚಿಲ್ಲರೆ ರೂಪಾಯಿಗಳನ್ನು ಕೊಡಬೇಕಾದುದಕ್ಕೆ ಫೀನಲ್ ಇಂಟರೆಸ್ಟ್ ಸೇರಿಸಿ ೧೩೪೦೦ ರೂಪಾಯಿಗಳನ್ನು ಕೊಡಬೇಕೆಂದು ನೋಟೀಸ್ ಕೊಟ್ಟು ಅನೇಕ ವಿಧವಾದ ತೊಂದರೆ ಕೊಡುತ್ತಿದ್ದಾರೆ. ತಮ್ಮ ಆಜ್ಞೆಯಂ ಬರವಣಿಗೆಯಲ್ಲಿದಯೇ ಹೊರತು ಕಾರ್ಯರೂಪದಲ್ಲಿ ಇಲ್ಲ.

ಶ್ರೀ ಎನ್. ಚಿಕ್ಕೇಗೌಡ.- ಕಾರ್ಯರೂಪಕ್ಕೆ ಬರುವುದಕ್ಕೆ ಹಂಕುಮನ್ನು ಹೊರಡಿಸಿದ್ದೇವೆ. ನಿಮ್ಮಲ್ಲಿ ಹಣ ಕೊಡಬೇಕಾದವರು ೪ ಜನರಿದ್ದಾರೆ, ಅವರ ಹೆಸರುಗಳೇನೆಂದರೆ. ಶ್ರೀ ಎನ್. ಹೆಚ್. ರೇಣುಕಾರಾಧ್ಯ, ಲಿಂಗೇಗೌಡ, ಭೈರೇಗೌಡ ಮತ್ತು ನೀಲಕಂಠಸ್ವಾಮಿ. Out of the four persons, two persons Sri Renukaradhya and Neelakantaswamy have cleared the entire loan amount before the issue of the Government Order No. AF 41/74 dated 13/14th August 1975 which exempted from the payment of penal interest. The other two loanees are still in arrears. As such these two loanees cannot get exemption from the payment of penal interest during 1975-76.

ಶ್ರೀ ಟಿ. ಎಂ. ಮಂಜುನಾಥ್.—ತಾವು ಆಜ್ಞೆ ಹೊರಡಿಸುವುದಕ್ಕೆ ಮುಂಚೆ ಪೀನಲ್ ಇಂಟರೆಸ್ಟ್ ಪಾವತಿ ಮಾಡಿದ್ದರೆ ಅವರಿಗೆ ಅದನ್ನು ವಾಪಸ್ಸು ಕೊಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಆಜ್ಞೆ ಹೊರಡಿಸಿದ ಮೇಲೆ ೬ ತಿಂಗಳವರೆಗೆ ಕೊಡಬಹುದು ಎಂದು ಹೇಳಿದ್ದೇವೆ. ಅದಕ್ಕೆ ಹಿಂದೆ ಕೊಟ್ಟಿದ್ದರೆ ಅದನ್ನೂ ಕೊಡಬೇಕೆಂದರೆ ಸರ್ಕಾರ ಹುಟ್ಟಿದ ಲಾಗಾಯ್ತು ಆಜ್ಞೆಯನ್ನು ಜಾರಿಗೆ ಕೊಡಬೇಕಾಗುತ್ತದೆ.

ಶ್ರೀ ಎಂ. ಬಿ ರಾಮಸ್ವಾಮಿ.—ಟ್ರಾಕ್ಟರ್ ಬಗ್ಗೆ ಪೀನಲ್ ಇಂಟರೆಸ್ಟ್ ವಿನಾಯಿತಿ ಮಾಡಿದ್ದೇವೆ ಎಂದು ಹೇಳಿದ್ದೀರಿ, ಇದೇ ರೀತಿ ಬೇರೆ ಡೀಸೆಲ್ ಇಂಜಿನ್ ಬಗ್ಗೆ ಬಾಕಿ ಇವೆ. ಅವೆಲ್ಲವನ್ನು ವಿನಾಯಿತಿ ಮಾಡುವುದಕ್ಕೆ ಆಜ್ಞೆ ಹೊರಡಿಸುತ್ತೀರಾ ?

ಅಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಈ ಆಜ್ಞೆಯನ್ನು ಮಾರ್ಚಿ ೩೧ರ ವರೆಗೆ ಮುಂದುವರಿಸುತ್ತೀರಾ ? ಈಗ ತಾನೇ ಸುಗ್ಗಿ ಕಾಲ ಪ್ರಾರಂಭವಾಗಿದೆ, ಒಕ್ಕಣೆ ನಡೆಯುತ್ತಿದೆ. ಆದಕಾರಣ, ಮಾರ್ಚ್ ೩೧ರ ವರೆಗೆ ಅವಧಿಯನ್ನು ವಿಸ್ತರಿಸಿದರೆ ರೈತರಿಗೆ ಹೆಚ್ಚಿನ ಪ್ರಯೋಜನವಾಗುತ್ತದೆ. ದಯವಿಟ್ಟು ಹಾಗೆ ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಆಜ್ಞೆಯನ್ನು ಮುಂದುವರಿಸುವುದಕ್ಕೆ ಆಗುವುದಿಲ್ಲ. As an incentive we gave the special concession especially to the farmers who owned tractors. Such being the case, I do not think a man who cannot pay the amount within six months will be able to pay even after six months. We have specially stated in that order that no more extension will be given.

Tank across Jaymangali River in Koratagere Taluk

32. SRI MUDDURAMAIAH (Koratagere).—Will the Minister of State for Major and Medium Irrigation be pleased to state :—

(a) whether any proposals have been made for the construction of a tank across Jayamangali river near Tirukanapalya or Teethi village, Koratagere Taluk;

(b) if so, the estimated cost of the same ;

(c) when it will be taken up ?

SRI SUBHASH ASTHURE (Minister of State for Major and Medium Irrigation).—

(a) Yes.

(b) Rs. 106 Lakhs.

(c) The preliminary works are to be taken up during 1976-77.

ಶ್ರೀ ಮಂದ್ದುರಾಮಯ್ಯ.—ಈಗಾಗಲೇ ಈ ಕೆರೆಗೆ ಸರ್ಕಾರದ ಮಂಜೂರಾತಿ ದೊರೆತಿದೆ ಎಂಬುದು ನಿಜವೆ ?

† ಶ್ರೀ ಸುಭಾಷ್ ಅಸ್ತೂರೆ.—ಸರ್ಕಾರದ ಮಂಜೂರಾತಿ ಸಿಕ್ಕಿದೆ, ೧೯೭೬-೭೭ರಲ್ಲಿ ೧೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡತಕ್ಕ ಬಜೆಟ್ ಪ್ರಾವಿಶನ್ ಮಾಡಲಾಗಿತ್ತು ದೆ.

ಶ್ರೀ ಮಂದ್ದುರಾಮಯ್ಯ.—ಈ ಕೆರೆಯ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಸುಭಾಷ್ ಅಸ್ತೂರ್.—ಮಾಡುತ್ತೇವೆ.